# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. :57 ಫ್ರಾ.ಸಾ. : 42**

ಸಾಕ್ಷಿಯ ಹೆಸರು : ಕ್ಯಾಪ್ಟನ್ ಅರುಣ ಗಾಂವಕಾರ
ತಂದೆಯ ಹೆಸರು : ರಾಮಚಂದ್ರ ಗಾಂವಕಾರ
ವಯಸ್ಸು : 69 ವರ್ಷ
ಕೆಲಸ : ನಿವೃತ್ತ ಇಂಡಿಯನ್ ನೇವಲ್ ಆಫೀಸರ್
ವಾಸ : ಕಾರವಾರ.

**ದಿನಾಂಕಃ 29–10–2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:–**

1. ನಾನು ಡಿಸೆಂಬರ್ 2013 ರವರೆಗೆ ನೇವೆಲ್ ಬೇಸ್‌ನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ಆ ನಂತರ ನನ್ನ ನಿವೃತ್ತಿಯ ನಂತರ ಅಂದರೆ ಅಕ್ಟೋಬರ್ 2014 ರಿಂದ ಮಾರ್ಚ್ 2023 ರವರೆಗೆ ನಾನು ಕಾರವಾರದ ಬೈತ್‌ಕೋಲ್‌ನ ಬಂದರಿನಲ್ಲಿ ಕ್ಯಾಪ್ಟನ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ಚಾಸಾ–58 ಶಿವಸ್ವಾಮಿ ನನಗೆ ಗೊತ್ತು, ಅವರು ನಮ್ಮ ಬಂದರು ಇಲಾಖೆಯ ನಿರ್ದೇಶಕರಾಗಿದ್ದರು. ದಿನಾಂಕಃ 21.11.2018 ರಂದು ಕಾರವಾರ ಪೊಲೀಸರಿಂದ ನಮ್ಮ ಕವೇರಿಗೆ ಒಂದು ಕೋರಿಕೆ ಪತ್ರ ಬಂದಿದ್ದು, ಅದರಲ್ಲಿ ಕಾರವಾರದ ಬಂದರಿನಲ್ಲಿ ಅಧಿಕೃತವಾಗಿ ನೊಂದಣಿಯಾಗಿರುವ ಶಿಪ್ಪಿಂಗ್ ಎಜೆನ್ಸಿಗಳ ಮಾಹಿತಿಯನ್ನು ನೀಡುವಂತೆ ಕೋರಿ ಕೊಂಡಿರುತ್ತಾರೆ. ಅದರಂತೆ ನಾನು ನಮ್ಮ ಕಛೇರಿಯ ದಾಖಲೆಗಳನ್ನು ಪರಿಶೀಲಿಸಿ, ದಿನಾಂಕಃ 22.11.2018 ರಂದು ಶಿಪ್ಪಿಂಗ್ ಎಜೆನ್ಸಿಗಳ ಹೆಸರು ಹಾಗೂ ಅವುಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನಾಲ್ಕು ಪ್ರತ್ಯೇಕ ಪಟ್ಟಿಗಳಲ್ಲಿ ನಮೂದಿಸಿ, ಸದರಿ ಪಟ್ಟಿಗಳನ್ನು ಕವಚ ಪತ್ರದೊಂದಿಗೆ ಕಾರವಾರದ ಪೊಲೀಸರಿಗೆ ನೀಡಿರುತ್ತೇನೆ. ಪೊಲೀಸರಿಂದ ಬಂದ ಕೋರಿಕೆ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–102 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ತಾನು ನೀಡಿದ ಎಜೆನ್ಸಿಗಳ ನಾಲ್ಕು ಪಟ್ಟಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು 103 ರಿಂದ 106 ಎಂದು, ಅವುಗಳ ಮೇಲಿರುವ ಸಾಕ್ಷಿಯ ಸಹಿಗಳನ್ನು ನಿಪಿ–103(ಎ), 104(ಎ),105(ಎ) ಮತ್ತು 106(ಎ) ಎಂದು ಗುರುತಿಸಲಾಯಿತು. ಅದೇ ರೀತಿ

ಸಾಕ್ಷಿಯು ತಾನು ನೀಡಿದ ಕವಚ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-107 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-107(ಎ) ಎಂದು ಗುರುತಿಸಲಾಯಿತು.

3. ಆ ನಂತರ ದಿನಾಂಕಃ 25.11.2018 ರಂದು ಕಾರವಾರದ ಪೊಲೀಸರು ನಮ್ಮ ಇಲಾಖೆಯ ನಿರ್ದೇಶಕರಿಗೆ ಮತ್ತೊಂದು ಕೋರಿಕೆ ಪತ್ರ ನೀಡಿದ್ದು, ಅದರಲ್ಲಿ ಶಿಪ್ಪಿಂಗ್ ಎಜೆನ್ಸಿಗಳಿಗೆ ಸಂಬಂಧಿಸಿದಂತೆ ಒಟ್ಟು ಆರು ಮಾಹಿತಿಗಳನ್ನು ಕೋರಿದ್ದು, ಆನಂತರ ನಮ್ಮ ನಿರ್ದೇಶಕರು ನನಗೆ ಸದರಿ ಕೋರಿಕೆ ಪತ್ರದ ಮೇಲೆಯೇ ಅವರು ಸೂಚಿಸಿದ ಮಾಹಿತಿಗಳನ್ನು ನೀಡುವಂತೆ ಲಿಖಿತವಾಗಿ ಸೂಚಿಸಿರುತ್ತಾರೆ. ಅದರಂತೆ ನಾನು ನಮ್ಮ ಕಛೇರಿಯ ದಾಖಲೆಗಳನ್ನು ಪರಿಶೀಲಿಸಿ, ಅವರು ಕೇಳಿದ ಮಾಹಿತಿಗೆ ಉತ್ತರವನ್ನು ನಮೂದಿಸಿ, ದಿನಾಂಕಃ 05.12.2018 ರ ಪತ್ರದೊಂದಿಗೆ ಮೂರು ಪ್ರತ್ಯೇಕ ಪಟ್ಟಿಗಳನ್ನು ಲಗತ್ತಿಸಿ, ನಮ್ಮ ನಿರ್ದೇಶಕರಿಗೆ ನೀಡಿರುತ್ತೇನೆ. ಆ ನಂತರ ನಮ್ಮ ನಿರ್ದೇಶಕರು ನಾನು ನೀಡಿದ ಮಾಹಿತಿಗಳನ್ನು ದಿನಾಂಕಃ 12.12.2018 ರಂದು ಕಾರವಾರದ ಪೊಲೀಸರಿಗೆ ನೀಡಿರುತ್ತಾರೆ. ಸಾಕ್ಷಿಯು ತಮಗೆ ಬಂದ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-108 ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ತಾನು ಮಾಹಿತಿ ನೀಡಿದ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-109 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-109(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ತಾನು ನೀಡಿದ ಮೂರು ಪಟ್ಟಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-110, 111 ಮತ್ತು 112 ಎಂದು, ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ-110(ಎ), 111(ಎ) ಮತ್ತು 112(ಎ) ಎಂದು ಗುರುತಿಸಲಾಯಿತು. ದಿನಾಂಕಃ 12.12.2018 ರಂದು ನಮ್ಮ ನಿರ್ದೇಶಕರು ನೀಡಿದ ಪತ್ರವನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ-113 ಎಂದು ಗುರುತಿಸಲಾಯಿತು.

(ಊಟದ ಸಮಯವಾಗಿದ್ದರಿಂದ, ಪಾಟೀ ಸವಾಲನ್ನು ಮಧ್ಯಾಹ್ನ 3.00 ಗಂಟೆಗೆ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ

**ಸಾಕ್ಷಿಯನ್ನು ಮಧ್ಯಾಹ್ನ 3.00 ಘಂಟೆಗೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

4. ನಾವು ಪೊಲೀಸರಿಗೆ ನೀಡಿರುವಂತಹ ಎಲ್ಲಾ ದಾಖಲೆಗಳ ಮೂಲ ಪ್ರತಿಗಳು ನಮ್ಮ ಕಛೇರಿಯಲ್ಲಿ ಇರುತ್ತವೆ. ಸದರಿ ಮೂಲ ದಾಖಲೆಗಳನ್ನು ಹಾಜರುಪಡಿಸಲು ನಮಗೆ ಯಾವುದೇ ತೊಂದರೆ ಇರುವುದಿಲ್ಲ. ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ದಾಖಲಾತಿಗಳ ಮೇಲೆ ದೃಡೀಕೃರಿಸಿದ ದಾಖಲೆಗಳೆಂದು ಬರೆದಿಲ್ಲ ಎಂದರೆ ಸರಿ. ಸದರಿ ದಾಖಲೆಗಳ ಮೂಲ ಪ್ರತಿಗಳು ನಮ್ಮ ಕಛೇರಿಯಲ್ಲಿ ಲಭ್ಯವಿರುತ್ತವೆ ಎಂಬ ಬಗ್ಗೆ ಸಹಾ ಆ ದಾಖಲೆಗಳ ಮೇಲೆ ನಮೂದು ಮಾಡಿಲ್ಲ ಎಂದರೆ ಸರಿ. ಸದರಿ ದಾಖಲೆಗಳ ಮೇಲೆ pioneer Shipping ಕಂಪನಿಯ ಮಾಲೀಕರ ಹೆಸರು ನಮೂದು ಇಲ್ಲ ಎಂದರೆ ಸರಿ. ಈ ಎಲ್ಲಾ ದಾಖಲೆಗಳು ಗಣಕೀಕೃತ ದಾಖಲೆಗಳು ಎಂದರೆ ಸರಿ. ಸದರಿ ದಾಖಲೆಗಳೊಂದಿಗೆ ಕಲಂ 65(ಬಿ) ಪ್ರಮಾಣ ಪತ್ರ ನೀಡಿಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಇರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಕಲಂ 65(ಬಿ) ಪ್ರಮಾಣ ಪತ್ರದ ಬಗ್ಗೆ ಮಾಹಿತಿ ಇರುವುದಿಲ್ಲ. ಸದರಿ ನಾನು ನೀಡಿದ ದಾಖಲೆಗಳೊಂದಿಗೆ ಕಲಂ.65(ಬಿ) ಪ್ರಮಾಣ ಪತ್ರ ನೀಡುವಂತೆ ಪೊಲೀಸರು ನನಗೆ ಹೇಳಿರುವುದಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳನ್ನು ನಮ್ಮ ಕಛೇರಿಯ ಸಿಬ್ಬಂದಿಗಳು ಗಣಕೀಕರಣ ಮಾಡಿರುತ್ತಾರೆ ಹಾಗೂ ಆ ದಾಖಲೆಗಳ ಮೇಲೆ ಸದರಿ ಸಿಬ್ಬಂದಿಗಳ ಸಹಿ ಇರುವುದಿಲ್ಲ ಎಂದರೆ ಸಾಕ್ಷಿಯು ಅದರ ಅವಶ್ಯಕತೆ ಕಂಡು ಬಂದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ಪೊಲೀಸರ ಕೋರಿಕೆಯ ಮೇರೆಗೆ ಸೃಷ್ಟಿಸಿ ನೀಡಿರುತ್ತೇನೆ ಹಾಗೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ